**IIನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ**

**OS No.1357/2012**
**DW.1**

**ದಿನಾಂಕಃ 28.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು ವಾದಿಪರ ಶ್ರೀಃ ABC ವಕೀಲರಿಂದ.**

**ಸಾಕ್ಷಿಗೆ ಮರಾಠಿ ಭಾಷೆ ಬರುತಿದ್ದು ನ್ಯಾಯಾಲಯಕ್ಕೆ ಸದರಿ ಭಾಷೆ ಅರ್ಥವಾಗದ ಕಾರಣ ವಕೀಲರಾದ ಶ್ರೀಮತಿಃSYDರವರನ್ನು ನೇಮಿಸಿ ಕನ್ನಡ ಭಾಷೆಗೆ ತರ್ಜುಮೆ ಮಾಡಿ ಹೇಳಿಕೆ ಪಡೆದುಕೊಳ್ಳಲಾಯಿತು. ಪ್ರತಿವಾದಿಯು ತರ್ಜುಮೆದಾರರರಿಗೆ ತರ್ಜುಮೆದಾರರ ಫೀ ರೂ.300/- ನೀಡಲು ಅದೇಶಿಸಿದೆ.**

ನಿಡಿ.4 ರಲ್ಲಿ 2 ವ್ಯವಸಾಯದ ಜಮೀನುಗಳನ್ನು ಕೂಡಿಕೊಂಡು 2 ಮನೆಯ ಆಸ್ತಿಗಳು ಮತ್ತು ಖಾಲಿ ಜಾಗದ ಬಗ್ಗೆ ಉಲ್ಲೇಖಿಸಲಾಗಿದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಯಾರಿಗೆ ಎಷ್ಟು ಆಸ್ತಿ ಹೋಗಿರುತ್ತದೆ ಎಂದು ಸ್ಪಷ್ಟವಾಗಿ ತೋರಿಸಲಾಗಿದೆ ಎಂದರೆ ಸರಿ. ನಿಡಿ.4ರ ಪ್ರಕಾರ ಯಾರ ಯಾರ ಪಾಲಿಗೆ ಎಷ್ಟು ಎಷ್ಟು ಜಮೀನುಗಳು ಮತ್ತು ಖಾಲಿ ಜಾಗಗಳು ಹೋಗಿರುತ್ತವೆ ಆ ಪ್ರಕಾರ ಅವರು ಕಬ್ಜ ವಹಿವಾಟಿನಲ್ಲಿ ಅಂದಿನಿಂದ ಅಂದರೆ 21-09-2000ರಿಂದ ಇವತ್ತಿನವರೆಗೂ ಇರುತ್ತಾರೆ ಎಂದರೆ ಸರಿ.

2. ದಾವಾ ಶಡ್ಯೂಲ್ ಎ ಆಸ್ತಿಯ ಕ್ರಮ ಸಂಖ್ಯೆ 2ರ ಆಸ್ತಿಯಾದ ಸರ್ವೆ ನಂ. 605/2ಬಿ ಕ್ಷೇತ್ರ 1 ಎಕರೆ 23 ಗುಂಟೆ ಇತ್ತು ಎಂದರೆ ಸರಿ. ಸದರಿ ಜಮೀನಿನ ಕ್ಷೇತ್ರದ ಪೈಕಿ 6 ಗುಂಟೆ 14 ಅಣೆ ಆಸ್ತಿಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಪ್ರಾಧಿಕಾರದವರು 6 ಗುಂಟೆ 14 ಅಣೆ ಆಸ್ತಿಯನ್ನು ತಮ್ಮ ಮಾಲೀಕಿ ಮತ್ತು ಕಬ್ಜೆಯನ್ನು ಹೊಂದಿರುತ್ತಾರೆ ಎಂದರೆ ಸರಿ. ಸರ್ವೆ ನಂ.605/2ಬಿ ರ ಆಸ್ತಿಯು 1ನೇ ಪ್ರತಿವಾದಿಯ ಹೆಸರನಲ್ಲಿ ಇತ್ತು ಎಂದರೆ ಸರಿ. ನಾನು ಸ್ವಾಧೀನ ಪಡಿಸಿಕೊಂಡ ಆಸ್ತಿಗೆ ಸಂಬಂಧಪಟ್ಟಂತೆ ನಮ್ಮ ತಂದೆಯಾದ 1ನೇ ಪ್ರತಿವಾದಿಯಿಂದ ಪರಿಹಾರ ಪಡೆಯಲು ಒಟ್ಟು

ಮುಕ್ತಿಹಾರ ಪತ್ರವನ್ನು ನನ್ನ ಹೆಸರಿಗೆ ಬರೆಸಿಕೊಂಡಿದ್ದೆ ಎಂದರೆ ಸರಿ. ಸದರಿ ಒಟ್ಟು ಮುಕ್ತಿಹಾರ ಪತ್ರವನ್ನು ಪರಿಹಾರ ಪಡೆಯಲು ಉಪಯೋಗಿಸಿಕೊಂಡಿರುತ್ತೇನೆ ಎಂದರೆ ಸರಿ. ರಾಷ್ಟ್ರೀಯಾ ಹೆದ್ದಾರಿ ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ ಬೆಳಗಾವಿ ಮತ್ತು ಧಾರವಾಡ ಕಛೇರಿಗೆ ಹೋಗಿ ಬರುವುದು ಮಾಡುತಿದ್ದೆ ಎಂದರೆ ಸರಿ. ರಾಷ್ಟ್ರೀಯಾ ಹೆದ್ದಾರಿ ಪ್ರಾಧಿಕಾರಗಳು ಪರಿಹಾರದ ಚೆಕ್ಕುಗಳನ್ನು 1ನೇ ಪ್ರತಿವಾದಿಯ ಹೆಸರಿನಲ್ಲಿ ನೀಡಿದ್ದರು ಎಂದರೆ ಸರಿ. ಮೊದಲನೆ ಚೆಕ್ಕನ್ನು 1ನೇ ಪ್ರತಿವಾದಿಯ ಹೆಸರಿಗೆ ರೂ.79,326/-ಕ್ಕೆ ಸಂಬಂಧಪಟ್ಟಂತೆ ನೀಡಿರುತ್ತಾರೆ ಎಂದರೆ ಸರಿ. ದಿನಾಂಕಃ24-05-2012ರಂದು ರಾಷ್ಟ್ರೀಯಾ ಹೆದ್ದಾರಿ ಪ್ರಾಧಿಕಾರದವರು ಹೆಚ್ಚುವರಿ ಪರಿಹಾರ ಹಣ ರೂ.3,87,200/- ಹಣವನ್ನು ನನ್ನ ಮತ್ತು ನನ್ನ ತಂದೆಯ ಹೆಸರಿನಲ್ಲಿ SBI ಬ್ಯಾಂಕಿನಲ್ಲಿ ಜಂಟಿಯಾಗಿ ಜಮಾ ಮಾಡಿರುತ್ತದೆ ಎಂದರೆ ಸರಿ. ಅದೇರೀತಿ ದಿನಾಂಕಃ25-02-2013ರಂದು ಪರಿಹಾರ ಹಣ ರೂ.2,32,650/-ನ್ನು ನನಗೆ ಪಾವತಿಸಲಾಗಿದೆ ಎಂದರೆ ಸರಿ. ಸದರಿ ರಾಷ್ಟ್ರೀಯಾ ಹೆದ್ದಾರಿ ಪ್ರಾಧಿಕಾರದವರು ಸ್ವಾಧೀನ ಪಡೆಸಿಕೊಂಡ 6 ಗುಂಟೆ 14 ಅಣೆ ಆಸ್ತಿಯು 1ನೇ ಪ್ರತಿವಾದಿಯ ಗಂಡನಾದಿ ನಿಂಗಾಣಿ ಹಿಸ್ಸೆಗೆ ಹೋಗಿರುವ ಆಸ್ತಿ ಎಂದರೆ ಸರಿ. ವಾದಿಯರ ಕಬ್ಜೆಯಲ್ಲಿರುವ 21 ಗುಂಟೆ ಪೈಕಿ 6 ಗುಂಟೆ 14 ಅಣೆ ಆಸ್ತಿಯು ರಾಷ್ಟ್ರೀಯಾ ಹೆದ್ದಾರಿ ಪ್ರಾಧಿಕಾರಕ್ಕೆ ಹೋಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ವಾದಿಯರಿಗೆ ಕೇವಲ 14 ಗುಂಟೆ 2 ಅಣೆ ಮಾತ್ರ ಇರುತ್ತದೆ ಎಂದರೆ ಸರಿ.

3. ನಮ್ಮ ತಂದೆ ಮತ್ತು ತಾಯಿಯವರು ಒಟ್ಟಿಗೆ ಇರುತ್ತಿದ್ದರು ಎಂದರೆ ಸಾಕ್ಷಿಯು ನಿಡಿ.4ರ ದಾಖಲೆಯು ಆದ ನಂತರ ನಾವು ಪ್ರತ್ಯೇಕವಾಗಿ ಇರುತ್ತಿದ್ದೆವು ಎಂದು ನುಡಿಯುತ್ತಾರೆ. ನಮ್ಮ ತಂದೆ 1ನೇ ಪ್ರತಿವಾದಿಯು ಮೃತರಾಗುವ 3 ತಿಂಗಳ ಪೂರ್ವದಲ್ಲಿ ಅವರಿಗೆ ಊಟ ಮತ್ತು ಔಷಧಿಯನ್ನು ಕೊಡುತಿದ್ದೆವು. ನಿಡಿ.4ರಲ್ಲಿ ಸಾಮೂಹಿಕ ಆಸ್ತಿ ಎಂದು ಇಟ್ಟ ಆಸ್ತಿಯಲ್ಲಿ ಮೃತ 1ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಇರುತ್ತಿದ್ದರು. 1ನೇ ಪ್ರತಿವಾದಿಯು ಅವರ 95ನೇ ವಯಸ್ಸಿನಲ್ಲಿ ಮೃತರಾಗಿರುತ್ತಾರೆ. 1ನೇ ಪ್ರತಿವಾದಿಯು ಮೃತರಾಗುವ 2 ವರ್ಷದ ಪೂರ್ವದಲ್ಲಿ ಅವರು

ವಯಸ್ಸಾದ ಕಾರಣ ಅಶಕ್ತರಿದ್ದು ಕಣ್ಣು ಕಾಣಿಸುತ್ತಿರಲಿಲ್ಲ ಅವರ ಮಾನಸಿಕ ಸ್ಥಿತಿ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ಅವರು ಮಾನಸಿಕ ಸ್ಥಿತಿ ಮತ್ತು ದೈಹಿಕ ಸ್ಥಿತಿ ಸರಿ ಇಲ್ಲದೆ ಇದ್ದರು ಸರಿ ಇರುತ್ತದೆ ಎಂದು ನಾನು ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಶೆಡ್ಯೂಲ್ ಎ ಆಸ್ತಿಯ ಕ್ರಮ ಸಂಖ್ಯೆ 1ರ ಆಸ್ತಿಯಾದ ಸರ್ವೇ ನಂ.605/2ಎ ಕ್ಷೇತ್ರ 1 ಎಕಟೆ 23 ಗುಂಟೆ ಆಸ್ತಿಯು ನನ್ನ ಅಜ್ಜ ಬೀಮ್ಸು ಸಂತಾಜಿರವರು ಪೂರ್ಣನಾತೆಯಿಂದ ಮಾಡುತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ12-06-1974ರಂದು ವಾರಸ ಡೈರಿ ಸಂಖ್ಯೆ 6453ರಂತೆ ಪ್ರಕಾರ ಮೃತ ಬೀಮ್ಸು ಸಂತಾಜಿರವರ ಹೆಸರನ್ನು ಕಡಿಮೆ ಮಾಡಿ ನನ್ನ ತಂದೆಯ ಹೆಸರನ್ನು ಒಬ್ಬನೆ ಮಗನೆಂದು ದಾಖಲಿಸಲಾಗಿರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ಬೀಮ್ಸು ಸಂತಾಜಿರವರು ಮಾಡುತಿದ್ದರು ನಂತರ ನಮ್ಮ ತಂದೆಯವರು, ಅವರ ಮೃತರಾದ ನಂತರ ನಾವು ಕಬ್ಜ ವಹಿವಾಟು ಮಾಡುತ್ತಾ ಬಂದಿರುತ್ತೇವೆ ಎಂದರೆ ಸರಿ. ನಿಡಿ.4ರ ದಾಖಲೆಯ ಪೂರ್ವದಲ್ಲಿ ಎಲ್ಲಾ ಜಮೀನುಗಳು ಒಟ್ಟು ಕುಟುಂಬದ ಆಸ್ತಿಗಳು ಇದ್ದವು ಎಂದರೆ ಸರಿ. ದಾವಾ ಶೆಡ್ಯೂಲ್ ಎ ಆಸ್ತಿಯ ಕ್ರಮ ಸಂಖ್ಯೆ 1ರ ಆಸ್ತಿಯಾದ ಸರ್ವೇ ನಂ.605/2ಎ ಈಗಿನ ಸಂಖ್ಯೆ ಸರ್ವೇ ನಂ.605/24 ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಗಲ್ಲಿ ಈವರೆಗೂ ನಮ್ಮ ಸಹೋದರಿಯರಿಗೆ ಯಾವುದೇ ಹಿಸ್ಸೆ ಮತ್ತು ಹಕ್ಕು ಪಾಲುಗಳನ್ನು ನೀಡಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**

**ಓ ಹೇ ಕೇ ಸರಿಯಿದೆ.**

**Sd/-**

**2ನೇ ಹೆಚ್ಚುವರಿ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ. ಬೆಳಗಾವಿ**